ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಮನೆ ಮನೆಗೆ ಗಂಗೆ
ಜಲ ಜೀವನ್ ಮಿಷನ್

# ಪಾವಗಡದ ಭವಿಷ್ಯ ಬದಲಾಯಿಸಿದ ಜಲಜೀವನ್ ಮಿಷನ್ ಯೋಜನೆ





ಕುಡಿಯುವ ನೀರು ಅಮೃತಕ್ಕೆ ಸಮಾನ. ಆದರೇ ಅದೇ ಅಮೃತ ವಿಷವಾದರೆ? ಕುಡಿಯುವ ನೀರು ನಮ್ಮ ದಾಹ ತೀರಿಸುವ ಬದಲು, ನಮ್ಮ ಜೀವಕ್ಕೆ ಅಪಾಯ ತಂದೊಡ್ಡಿದರೆ? ಇದನ್ನು ಊಹಿಸಲು ಅಸಾಧ್ಯ. ಅಂತಹದರಲ್ಲಿ ಪಾವಗಡದ ಜನರು ಈ ಸಮಸ್ಯೆಯನ್ನು ಅಣುಭವಿಸುತ್ತಿದ್ದರು. ಶುದ್ಧ ಕುಡಿಯುವ ನೀರಿನ ಅಲಭ್ಯತೆಯಿಂದ ಈ ಊರಿನ ಜನರು ತತ್ತರಿಸಿ ಹೋಗಿದ್ದು ಮಾತ್ರವಲ್ಲ, ಅಂಗವೈಕ್ಯತೆ ಮತ್ತಿತರ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು.

**ಆದ್ರೀಗ**

***ಜಲಜೀವನ್ ಮಿಷನ್‌ಯೋಜನೆಯು ಪಾವಗಡದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿದ್ದು, ಜನರೂ ಖುಷಿಯಾಗಿದ್ದಾರೆ.***

## ಅನಾರೋಗ್ಯಕ್ಕೆ ಕಾರಣವಾಗಿದ್ದ ಫ್ಲೋರೈಡ್‌ಯುಕ್ತ ನೀರು

ಬೆಂಗಳೂರಿನಿಂದ 157.8 ಕಿ.ಮೀ ದೂರವಿರುವ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ದಶಕಗಳಿಂದ ನೀರಿನ ಸಮಸ್ಯೆ ಕಾಡುತ್ತಿತ್ತು. ಬರಗಾಲ ಎಂಬ ಪದಕ್ಕೆ ಪರ್ಯಾಯ ಪದವಾಗಿ ಹೋಗಿದ್ದ ಪಾವಗಡದಲ್ಲಿ ಬೋರ್‌ವೆಲ್ ಕೊರೆದರೂ, ಭೂಮಿಯ ಒಡಲಿನಿಂದ ಫ್ಲೋರೈಡ್‌ಯುಕ್ತ ವಿಷಪೂರಿತ ನೀರು ಹೊರಬರುತ್ತಿತ್ತು. ನೀರಿನಲ್ಲಿ 1.5ರಷ್ಟು ಫ್ಲೋರೈಡ್ ಅಂಶವಿದ್ದರೆ ಅದು ಕುಡಿಯಲು ಯೋಗ್ಯವಲ್ಲ ಎಂದು ತಜ್ಞರು ಹೇಳುತ್ತಾರೆ. ಆದರೆ ಪಾವಗಡ ತಾಲ್ಲೂಕಿನ ಕೆಲ ಹಳ್ಳಿಗಳಲ್ಲಿ ಇದರ ಪ್ರಮಾಣ 3.5 ರಷ್ಟಾಗಿದೆ. ಉಳಿದಂತೆ ಬಹುತೇಕ ಗ್ರಾಮಗಳಲ್ಲಿ ಫ್ಲೋರೈಡ್ ಅಂಶ 2.5ಕ್ಕಿಂತಲೂ ಹೆಚ್ಚಿದೆ.

ಶುದ್ಧ ನೀರಿನ ಅಲಭ್ಯತೆಯ ಕಾರಣದಿಂದ ಪಾವಗಡದ ಜನರು ಈ ಫ್ಲೋರೈಡ್‌ಯುಕ್ತ ನೀರನ್ನೇ ಸೇವಿಸಬೇಕಾಗಿತ್ತು. ಪರಿಣಾಮ ಅಂಗವೈಕ್ಯಲ್ಯತೆ, ಮೂಳೆಸವೆತ, ಮಕ್ಕಳಲ್ಲಿ ದಂತಕ್ಷಯ ಮತ್ತಿತರ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗಬೇಕಾಗಿತ್ತು. ಆದ್ರೀಗ ಜನರ ನಿರಂತರ ಹೋರಾಟ ಹಾಗೂ ಸರ್ಕಾರದ ಇಚ್ಛಾಶಕ್ತಿಯಿಂದ ಪಾವಗಡದ ಶಾಪ ವಿಮೋಚನೆಯಾಗುವ ಸಮಯ ಬಂದಿದ್ದು, ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಜಲ್ ಜೀವನ್ ಮಿಷನ್ ಸಹಭಾಗಿತ್ವದಲ್ಲಿ ಸರ್ಕಾರವು ಪಾವಗಡಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ರೂಪಿಸಿದೆ. 2018ರಲ್ಲಿ ಅಂದಿನ ಕರ್ನಾಟಕ ಸರ್ಕಾರ ಪಾವಗಡಕ್ಕೆ ಕುಡಿಯುವ ನೀರು ಒದಗಿಸುವ ಸಲುವಾಗಿ 2528.63 ಕೋಟಿ ರೂ. ಅನುದಾನವನ್ನು ಘೋಷಿಸಿತ್ತು. ಅದರಂತೆ 230ಕಿ.ಮೀ. ದೂರದ ತುಂಗಭದ್ರಾ ಜಲಾಶಯದ ಹಿನ್ನೀರನ್ನು ಶುದ್ಧೀಕರಿಸಿ, ಪೈಪ್‌ಲೈನ್ ಮೂಲಕ ಪಾವಗಡಕ್ಕೆ ಹರಿಸಲಾಗುತ್ತಿದೆ. ಕುಡಿಯಲು ಯೋಗ್ಯವಾದ ನೀರು ನಳ್ಳಿ ಮೂಲಕ ಪ್ರತೀ ಮನೆಗೆ ತಲುಪುವಂತೆ ಮಾಡಲಾಗಿದೆ.

ಜಾಕ್ ವೆಲ್ ಮೂಲಕ ತುಂಗಭದ್ರಾ ಜಲಾಶಯದ ಹಿನ್ನೀರನ್ನು ಟ್ಯಾಂಕ್‌ಗಳಿಗೆ ತುಂಬಲಾಗುತ್ತದೆ. ಅಲ್ಲಿಂದ ನೇರವಾಗಿ ನೀರು ಹೊಸಪೇಟೆಯ ಶುದ್ಧೀಕರಣ ಘಟಕ ತಲುಪಿ, ಹಲವಾರು ಹಂತಗಳಲ್ಲಿ ಶುದ್ಧೀಕರಣಗೊಳ್ಳುತ್ತದೆ.




ಈ ಶುದ್ಧೀಕರಣ ಘಟಕ ಸುಮಾರು **181** ಎಂಎಲ್‌ಡಿ ಅಷ್ಟು ನೀರನ್ನು ಶುದ್ಧೀಕರಿಸುವ ಸಾಮರ್ಥ್ಯ ಹೊಂದಿದೆ. ಹೊಸಪೇಟೆಯ ಶುದ್ಧೀಕರಣ ಘಟಕದಿಂದ ಪೈಪ್‌ಲೈನ್ ಮೂಲಕ ಸಾಗಿ ಬರುವ ನೀರು ಕೂಡ್ಲಿಗಿ, ಮೊಳಕಾಲ್ಮೂರು, ಚಳ್ಳಕೆರೆ ಸೇರಿದಂತೆ

**ಪಾವಗಡದ**

**1,116** **ಹಳ್ಳಿಗಳಿಗೂ ತಲುಪುತ್ತಿದೆ.**



ದೇಶದ ಅತಿ ದೊಡ್ಡ
ಕುಡಿಯುವ ನೀರಿನ ಯೋಜನೆಗಳಲ್ಲಿ
ಒಂದಾಗಿರುವ ಪಾವಗಡ ಯೋಜನೆ ಕರ್ನಾಟಕದ
ಹೆಮ್ಮೆಯಾಗಿದೆ. ಮೊದಲ ಬಾರಿಗೆ ಪಾವಗಡದ ಜನರು
ಅನಾರೋಗ್ಯ ಸಮಸ್ಯೆ ಹಾಗೂ ಫ್ಲೋರೈಡ್‌ನ
ಆತಂಕವಿಲ್ಲದೆ ತಮ್ಮ ಮನೆಯ ಮುಂದಿರುವ ನಳ್ಳಿಯಿಂದ
ನೀರು ಕುಡಿಯುತ್ತಿದ್ದಾರೆ.
ಅಷ್ಟೇ ಅಲ್ಲ, ಜನರು ವಲಸೆ ಹೋಗುವುದನ್ನು ಬಿಟ್ಟು,
ತಮ್ಮ ನೆಲದಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದಾರೆ.
ಅವರ ಮೊಗದಲ್ಲಿ ಈಗ ನಗುವಿದೆ, ತೃಪ್ತಿಯಿದೆ. ಈ
ಮೂಲಕ ಜಲಜೀವನ್ ಮಿಷನ್‌ಯೋಜನೆಯ
ಉದ್ದೇಶ ಈಡೇರಿದಂತಾಗಿದೆ.

